ದಿಃ 19-11-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

**ಪಾಟೀ ಸವಾಲು ಶ್ರೀ. ಆರ.ಬಿ .ಜೆ. ವಕೀಲರಿಂದಃ**

ನಾನು ವ್ಯವಸಾಯ ಮಾಡುತ್ತೇನೆ. ನನ್ನ ಆಸ್ತಿ ಸರ್ವೆ ನಂಬರ 632/1. ಅದರ ಪಹಣಿ ಪತ್ರಿಕೆಯನ್ನು ನಾನು ಹಾಜರು ಪಡಿಸಿಲ್ಲ. ಈ ಕೇಸನ ವಾದಿಯೂ ನೇಮಣ್ಣ ಮತ್ತು ಶಾಂತಪ್ಪನ ಮೇಲೆ ಹಾಕಿರುತಾರೆ . ವಾದಿ ಮತ್ತು ಪ್ರತಿವಾದಿಗಳ ಕುಟುಂಬಕ್ಕೆ ಒಟ್ಟು 13 ಎಕರೆ ಜಮೀನು ಇರುತ್ತದೆ. ಅದರ ಸರ್ವೆ ನಂಬರ, ಕ್ಷೇತ್ರ ಮತ್ತು ಚೆಕಬಂದಿ ಹೇಳಲು ಬರುವುದಿಲ್ಲ. ದಾವಾ ಆಸ್ತಿಗಳು ವಾದಿ ಮತ್ತು ಪ್ರತಿವಾದಿಗಳಿಗೆ ಅವರ ಹಿರಿಯರಿಂದ ಬಂದ ಆಸ್ತಿಗಳು ಎಂದರೆ ಸರಿ. ದಾವಾ ಆಸ್ತಿ ಬಿಟ್ಟು ಅವರ ಕುಟುಂಬಕ್ಕೆ ಬೇರೆ ಆಸ್ತಿಗಳು ಇಲ್ಲ ಎಂದರೆ ಸರಿ. ವಾದಿ ಮತ್ತು ಪ್ರತಿವಾದಿಗಳ ಮೂಲ ಉದ್ಯೋಗ ವ್ಯವಸಾಯ ಎಂದರೆ ಸರಿ. ದಾವಾ ಆಸ್ತಿಯನ್ನು ವಾದಿ ಮತ್ತು ಪ್ರತಿವಾದಿಗಳು ಜಂಟಿಯಾಗಿ ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ವಾದಿಯ ಮದುವೆ ಯಾವಾಗ ಆಯಿತು ಎಂದು ಹೇಳಲು ಬರುವುದಿಲ್ಲ. ವಾದಿಗೆ ಅವರ ತಂದೆ ಬಂಗಾರದ ಒಡವೆ ಕೊಟ್ಟಿದ್ದಾರೆ ಎಂದು ತೋರಿಸಲು ದಾಖಲೆಗಳು ಇಲ್ಲ. ವಾದಿ ಮತ್ತು ಪ್ರತಿವಾದಿಗಳ ಮಧ್ಯೆ ಯಾವಾಗ ವಾಟನಿ ಆಗಿದೆ ಎಂದು ಹೇಳಲು ಬರುವುದಿಲ್ಲ. ವಾಟನಿ ಆದ ಬಗ್ಗೆ ದಾಖಲೆಯನ್ನು ಬರೆದುಕೊಂಡಿಲ್ಲ. ವಾಟನಿ ಆಗಿದೆ ಎಂದು ಹೇಳುವಾಗ ವಾದಿಗೆ 5 ಲಕ್ಷ 5 ಸಾವಿರ ಹಣ ಮತ್ತು ಎರಡು ತೊಲೆ ಬಂಗಾರ ಕೊಟ್ಟಿದ್ದೇವೆ ಎಂದು ಸುಳ್ಳು

ಹೇಳುತ್ತಿದ್ದೇನೆಂದರೆ ಸರಿಯಲ್ಲ. ವಾಟನಿ ಆದಾಗ ನಾನು, ವೆಂಕಪ್ಪಾ ಅರಬಾಂವಿ , ದುರುಗು ದಡ್ಡಿ ಇದ್ದೇವು. ಪ್ರತಿವವಾದಿ ನಂಬರ 1 ಮತ್ತು 2 ರವರೆಗೆ ಯಾವ ಯಾವ ಆಸ್ತಿ ಹೋಯಿತು ಎಂದು ಗೊತ್ತಿಲ್ಲ. ನಾನು ವಾದಿಗೆ ಬಂಗಾರ ಕೊಡುವಾಗ ಮಾತ್ರ ಇದ್ದೆ ಎಂದು ಹೇಳುತ್ತಾರೆ. ಯಾವ ರೀತಿ ಆಸ್ತಿಗಳನ್ನು ವಿಭಾಗ ಮಾಡಿಕೊಂಡರು ಎಂದು ನನಗೆ ಗೊತ್ತಿಲ್ಲ. ವಿಭಾಗ ಆಗಿಲ್ಲ ಆದ್ದರಿಂದ ನನಗೆ ಹೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ನಾನು ಕೇವಲ ಬಂಗಾರ ಕೊಡುವಾಗ ಮಾತ್ರ ಇದ್ದೇವು ಎಂದು ಹೇಳುತ್ತಾರೆ. ವಾದಿ ಮತ್ತು ಪ್ರತಿವಾದಿಗಳ ಮಧ್ಯೆ ವಿಭಾಗ ಆಗಿದೆ ಮತ್ತು ವಾದಿಗೆ 1 ಲಕ್ಷ 5 ಸಾವಿರ ಹಣ ಮತ್ತು 2 ತೊಲೆ ಬಂಗಾರ ಕೊಟ್ಟಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿ ನಂಬರ 1 ಮತ್ತು 2 ನನ್ನ ಸ್ನೇಹಿತರು ಎಂದರೆ ಸರಿ. ಅವರಿಗೆ ಅನುಕೂಲವಾಗಲೀ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ವಾದಿಗಳು ಮತ್ತು ಪ್ರತಿವಾದಿಗಳು ಈಗೂ ಜಂಟಿ ಇದ್ದು ಈಗಲೂ ಸಾಮೂಹಿಕ ವಾಹಿವಾಟು ಮಾಡುತ್ತಿದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿ ನಂಬರ 1 ಮತ್ತು 2 ರವರೆಗೆ ಸಹಾಯ ಮಾಡಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ.ಹೇ. ಕೇ. ಸ. ಇದೆ.

ಪ್ರ.ಹಿ.ದಿ.ನ್ಯಾಯಾಧೀಶರು, ಚಿಕ್ಕೋಡಿ